ದಿನಾಂಕ: 04.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ.ಆರ್.ಕೆ ವಕೀಲರಿಂದ ವಾದಿ ಪರ

ಗಜಾನನಯ್ಯ ರವರು ದಿನಾಂಕ 23-3-1985 ರಂದು ಮೃತಪಟ್ಟಿರುತ್ತಾರೆ. ಗಜಾನನಯ್ಯ ಮತ್ತು ಶಾರದಮ್ಮನವರಿಗೆ 1955 ರಲ್ಲಿ ಒಂದು ಹೆಣ್ಣು ಮಗಳು ಜನನವಾಗಿರುತ್ತದೆ ಎಂದರೆ ಸರಿ. ಸದರಿ ಮಗು ಒಂದು ವರುಷದ ನಂತರ ಮೃತಪಟ್ಟಿರುತ್ತದೆ ಎಂದರೆ ಸರಿ. 1961 ನೇ ಇಸವಿಯಲ್ಲಿ ಒಂದು ಗಂಡು ಮಗು ಜನನವಾಗಿ ಮೃತಪಟ್ಟಿರುತ್ತದೆ ಎಂದರೆ ಸರಿ. ಗಜಾನನಯ್ಯ ಮತ್ತು ಶಾರದಮ್ಮ ಸೇರಿ ನಿಪಿ-1 ರಂತೆ ಮರಣ ಶಾಸನ ಪತ್ರ ಬರೆದಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಗಜಾನನಯ್ಯರವರ ಸಹಿ ಮತ್ತು ಶಾರದಮ್ಮನವರ ಹೆಬ್ಬಟ್ಟು ಇರುತ್ತದೆ ಎಂದರೆ ಸರಿ. ಸದರಿ ಗಜಾನನಯ್ಯ ನವರ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸದರಿ ವಿಲ್ ಗೆ ಚಂದ್ರಶೇಖರ ಮತ್ತು ಕೃಷ್ಣ ಸುಬ್ಬಯ್ಯನವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಅವರಿಬ್ಬರು ಜೀವಂತ ಇಲ್ಲ ಎಂದರೆ ಸರಿ.

ನಿಪಿ-1 ನೋಂದಣಿಯಾಗಿದೆ ಎಂದರೆ ಸರಿ. ಸದರಿ ವಿಲ್ ನಲ್ಲಿ ಗಜಾನನಯ್ಯ ಮತ್ತು ಶಾರದಮ್ಮಮೃತಪಟ್ಟ ನಂತರ ದಾವಾ ಸ್ವತ್ತು ವಾದಿಗಳಿಗೆ ಹೋಗಬೇಕಾಗಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ವಾದಿಗಳಿಗೆ ಹೋಗಬೇಕೆಂದು ಗಜಾನನಯ್ಯರವರ ಇಚ್ಛೆಯಾಗಿರುತ್ತದೆ ಎಂದರೆ ಇರಬಹುದು ಎನ್ನುವರು. ನಿಪಿ-1 ಗಜಾನನಯ್ಯರವರು ಬರೆದ ಕೊನೆಯ ವಿಲ್ ಎಂದರೆ ಸರಿ. ಸದರಿ ವಿಲ್ ನ್ನು ಗಜಾನನಯ್ಯರವರು ರದ್ದು ಮಾಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಒಂದು ವೇಳೆ ಗಜಾನನಯ್ಯ ರವರು ಮೊದಲು ಮೃತಪಟ್ಟರೇ ದಾವಾ ಸ್ವತ್ತನ್ನು ಶಾರದಮ್ಮನವರು ಪರಭಾರೆ ಮಾಡುವ ಹಕ್ಕು ಇರುವುದಿಲ್ಲ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಗಜಾನನಯ್ಯ ರವರು ಮೊದಲು ಮೃತಪಟ್ಟಿರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತು ಗೇಣಿ ಮೂಲಕ ಗಜಾನನಯ್ಯ ರವರಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುವರು. ನಿಪಿ-7 ಗೇಣಿ ಅರ್ಜಿಯಾಗಿರುತ್ತದೆ ಎಂದರೆ ಸರಿ. ನಿಪಿ-8 ಹಕ್ಕು ಪತ್ರ ವನ್ನು ಗಜಾನನಯ್ಯ ರವರ ಹೆಸರಿಗೆ ನೀಡಲಾಗಿರುತ್ತದೆ ಎಂದರೆ ಸರಿ. ನಿಪಿ-9 ಭೂ ನ್ಯಾಯ ಮಂಡಳಿಯ ಆದೇಶವಾಗಿರುತ್ತದೆ ಎಂದರೆ ಸರಿ. ನಿಪಿ-1 ನ್ನು ಬರೆಯುವ ಸಮಯದಲ್ಲಿ ದಾವಾ ಸ್ವತ್ತು ಗಜಾನನಯ್ಯರವರ ಹಕ್ಕು ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ಗಜಾನನಯ್ಯ ರವರು ಮೃತಪಟ್ಟ ನಂತರ ನಿಪಿ-1 ನ್ನು ರದ್ದುಪಡಿಸುವ ಅಧಿಕಾರ ಶಾರದಮ್ಮ ರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಗಜಾನನಯ್ಯ ರವರ ಇಚ್ಛೇಯ ವಿರುದ್ದವಾಗಿ ಶಾರದಮ್ಮನವರು ನಿಪಿ-1

ನ್ನು ರದ್ದು ಮಾಡಿದ ಕಾರಣ ಸದರಿ ರದ್ದತಿ ಪತ್ರಕ್ಕೆ ಯಾವುದೇ ಕಾನೂನು ಅಡಿಯಲ್ಲಿಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

ನನ್ನ ಹೆಸರಿಗೂ ಸಹ ದಾನ ಪತ್ರ ಮಾಡುವ ಹಕ್ಕು ಶಾರದಮ್ಮ ನವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಾಟಾಯಿಸುವ ಉದ್ದೇಶದಿಂದ ನಾನು ಶಾರದಮ್ಮನವರಿಗೆ ಪ್ರಭಾವ ಬೀರಿ ಅವರ ಕಡೆಯಿಂದ ವಿಲ್ ರದ್ದತಿ ಪತ್ರ ಮಾಡಿಸಿ ತದ ನಂತರ ದಾನ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ಗಜಾನನಯ್ಯ ನವರ ಅಂತ್ಯ ಕ್ರಿಯೆ ಕಾರ್ಯಕ್ರಮಗಳೆಲ್ಲವೂ ವಾದಿಗಳು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಶಾರದಮ್ಮನವರು ಹಾಜರಿರುತ್ತಾರೆ ಎನ್ನುವರು. ಶಾರದಮ್ಮನವರ ಅಂತ್ಯಕ್ರಿಯೆಗೆಳಲ್ಲವನ್ನು ವಾದಿಗಳೇ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಯಿವರಿದು ನಾನು ಹಣ ನೀಡಿರುತ್ತೇನೆ ಅದರ ಸಂಬಂಧಪಟ್ಟ ದಾಖಲೇಗಳನ್ನು ಹಾಜರುಪಡಿಸುತ್ತೇನೆ ಎನ್ನುವರು. ನಾನು ಯಾವುದೇ ಹಣ ಖರ್ಚು ಮಾಡಿಲ್ಲ ಮತ್ತು ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ದಾನ ಪತ್ರದ ಮೂಲಕ ನನಗೆ ಯಾವುದೇ ಹಕ್ಕು ಅಥವಾ ಸ್ವಾದೀನ ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ತಿಳಿಯದಂತೆ ನಾನು ದಾನ ಪತ್ರದ ಮೇಲೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ